ಅವರ ಮನೆಗೆ ಹೋಗಿದ್ದು ಬರಬಹುದು... ಅಲ್ವರಾ...'

ತಾಯಮ್ಮನ ಮಾತುಗಳು ಅಂತಃಕರಣವನ್ನು ಅಲುಗಿಸಿದ್ದು ಮಾತ್ರ ನಿಜವಾಗಿತ್ತು.

'ಆದರೂ... ಈ ದಿನ ನಿಂತು ಬರಬಹುದಿತ್ತಲ್ವ... ತಾಯಮ್ಮ... ಅಪರೂಪಕ್ಕೆ ಹೋಗಿದ್ದೀಯಾ... ಏನು ಅರ್ಜೆಂಟಿತ್ತು!... ಈ ಕಾಲದಲ್ಲಿ ಎಲ್ರೂ ನಿನ್ನ ಹಾಗೇ ಯೋಚನೆ ಮಾಡ್ತಾರಾ... ಹೇಳು... ತವರುಮನೆ ಆಸ್ತೀಲಿ ಪಾಲು ಬೇಕು ಅಂತ ಕೋರ್ಟ್‌ಗೆ ಹೋಗೋಂಥ ಕಾಲ ಇದು... ದಡ್ಡಮ್ಮಾ ಕಣೇ ನೀನು...'

ಅಂತ ಹಗುರವಾಗಿ ಪರಿಸ್ಥಿತಿಯನ್ನು ತಿಳಿಯಾಗಿಸಲು ನಕ್ಕಾಗ ತಾಯಮ್ಮ ಬಳಿಗೆ ಬಂದು ನಾನು ಬಿಡಿಸುತ್ತಿದ್ದ ಹುರುಳಿಕಾಯಿಯನ್ನು ಕೈಗೆ ತೆಗೆದುಕೊಂಡು ನಾರು ಬಿಡಿಸುತ್ತ ಗಂಭೀರವಾಗಿ ಅಂದಳು:

'ಬುಡಿ ಅಕ್ಕಾ, ಮನಸ ಕೊಡಾದು ಮನೆ ಗಂಟಾ... ಸಿವ ಕೊಡಾದು ಸಾಯಾ ಗಂಟ ಅಂತಾವ... ಬ್ಯಾರೆಯೋದ ಸ್ವತ್ತಿಗೆ ಆಸೆ ಮಾಡಬಾರ್ದು. ನಮ್ಮ ಕೈಲಾಗಿದ್ದು ಕೆಲ್ಸ ಮಾಡ್ಕಂಡು ನಾನು ಈಸು ವರ್ಸ ಮರ್ಯಾದೆಯಾಗಿ ಬಾಳ್ವೆ ಮಾಡಿದೀನಿ... ಒಬ್ರ ತಾವ ಈ ವರೆಗೂ ಕೈ ಒಡ್ಡಿಲ್ಲ ಕಂಡ್ರಾ... ಪಾಪ ತಮ್ಮಯ್ಯಂಗೂ ಎರಡು ಹೆಣ್ಣಮಕ್ಳು. ಅವೂ ನನ್ನಂಗೆ ವಸೀ ಕರ‍್ರಗಿದಾವೆ. ಇನ್ನು ಎಂಟು–ಒಂಬತ್ತನೇ ಕ್ಲಾಸು ಓದ್ತಾ ಅವೆ. ಅವಕ್ಕೆ ನೂರು ನೂರು ರೂಪಾಯಿ ಕೊಟ್ಟು, 'ಚಂದಾಗಿ ಓದ್ಕಂಡು ಮೇಡಂ ಆಗ್ರೇ... ನನ್ನಂಗೇ ಕರ‍್ರಗಿದೀವಿ... ಗಂಡು ಸಿಕ್ರೇ ಸಾಕೂಂತ ಬಿರ‍್ರನೆ ಮದ್ವೆ–ಗಿದ್ವೆ ಆಗ್‌ಗೀಗ್ ಬುಟ್ಟೀರೀ... ಜೀವನದಾಗೆ ಮದ್ವೆ ಒಂದೇ ಮುಖ್ಯ ಅಲ್ಲ... ಮದ್ವೇನ ಮಾಡ್ಕೋಂಡು ನನ್ನಂಥ ಮಕ್ಳ ಅನುಭವಿಸಿದ್ದೇ ಸಾಕು... ನೀವು ನಿಮ್ಮ ನಿಮ್ಮ ಕಾಲ ಮ್ಯಾಗೇ ನಿಂತ್ಕಳೀ...' ಅಂತಾವ ಬುದ್ಧಿ ಹೇಳಿ ಬಂದೆ. ನಮ್ಮವ್ವ ಕಣ್ಣಾಗೆ ನೀರು ಹಾಕ್ತು. 'ತಪ್ ಮಾಡ್ ಬುಟ್ಟೆ ಕಣ್ ತಾಯಿ' ಅಂತು. 'ನನ್ನ ಅಣೇ ಬರಕ್ಕೆ ನೀಯೇನು ಮಾಡೀಯವ್ವ... ಬುಡು ಬುಡು...' ಅಂತಂದೆ. ತಮ್ಮಯ್ಯ ತಬ್ಬಲಿಗರಿನಂಗೆ ನಿಂತಿದ್ದ. ಅವನ ಯೆಡ್ತಿಗೆ ಕಾಣದಂಗೆ ಅವನ ಕೈಗೆ ಒಂದ್ನೈನೂರು ರೂಪಾಯಿ ನೋಟಿಟ್ಟು... 'ಅವ್ವನ್ನ ಚೆನ್ನಾಗಿ ನೋಡ್ಕೋ ತಮ್ಮಯ್ಯ... ಅದಕ್ಕೆ ನಮ್ಮನ್ನ ಬಿಟ್ರೆ ಯಾರ‍್ಲಾ ದಿಕ್ಕು ಮುದುಕಿ–ಮುದುಕಿ ಅನ್ನಬೇಡ... ಕರುಳು ನೊಂದ್ಕಳುತ್ತೆ ಕಣಪ್ಪ... ಅವಾಗಾವಾಗ ಫೋನ್ ಮಾಡು ಅವ್ವನ್ನ ಕೈಲೂ ಮಾತಾಡ್ಸು... ಸಾಕು... ಅದ್ಕೂ ಸಮಾಧಾನ ಕಣ್ಲಾ... ನಮ್ಮೋರು ತಮ್ಮೋರೂಂತ ಮಾತಾಡ್ತಿದ್ರೆ ಅವ್ವಂಗೂ ಕುಸಿಯಾಯ್ತತದೆ...' ಅಂತೆಲ್ಲ ಬುದ್ಧಿಯೇಳಿದ್ದೇಯಾ... ಬಸ್ ಅತ್ಕಂಡು ಬತ್ತಲೆ ಇದ್ದೆ ಕಣಕ್ಕ... ನಾನು ತಪ್ಪು ಮಾಡಿದ್ನಾ... ಯೇಳೀ...'

ತಾಯಮ್ಮನ ಮಾತು ಕೇಳುತ್ತ ಕೇಳುತ್ತ... ನನ್ನ ಅಹಂನ ಕೋಟೆ ಕುಸಿಯುತ್ತ ಹೋಗಿತ್ತು. ಅವಳೊಬ್ಬ ನಿರಕ್ಷರಿ. ಅವಳಿಗೇನು ತಿಳಿಯುತ್ತೆ ಅಂತ ಮನೆ ಮಾಡಿದ್ದ ತಾತ್ಸಾರ ಕರಗಿ ಹೋಗಿತ್ತು ಕಣ್ಣು ತುಂಬಿ ಬಂದಿತ್ತು.

### ಶೈಲಜಾ ಸುರೇಶ್

ಲೇಖಕಿ ಹಾಸನದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ಹೊಂಗನಸು', 'ಇಂದಿರಾ', 'ಹೃದಯ ರಾಗ', 'ಮಾಮರವೆಲ್ಲೋ– ಕೋಗಿಲೆಯೆಲ್ಲೋ', 'ಬರೆದೆ ನೀನು ನಿನ್ನ ಹೆಸರ...' ಸೇರಿದಂತೆ ಆರು ಕಾದಂಬರಿಗಳನ್ನು ಬರೆದಿದ್ದಾರೆ. 'ಅಕ್ಕಮ್ಮ ಮತ್ತು ಇತರ ಕತೆಗಳು', 'ಬದುಕು ಬರಿಯ ಭ್ರಮೆಯೇ', 'ಆವರ್ತ', 'ಅನಾವರಣ', 'ಯಾವ ಹೂವು ಯಾರ ಮುಡಿಗೊ' ಸೇರಿದಂತೆ 10 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.